2 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯದಲ್ಲಿ
ಚಿಕ್ಕಮಗಳೂರು

ಸತ್ರ ಮೊಕದ್ದಮೆ ನಂಃ198/2021

| | | | |
|---|---|---|---|
| ಸಾಕ್ಷಿದಾರರ ಹೆಸರು | - | ರಾಜೇಶ್ ಗೌಡ | ಪಿಡಬ್ಲೂ-3 |
| ತಂದೆಯ ಹೆಸರು | - | ಲೇಟ್ ಮಾದೇಗೌಡ | ಸಿಡಬ್ಲೂ -2 |
| ವಯಸ್ಸು | - | 36 ವರ್ಷ | |
| ಉದ್ಯೋಗ | - | ಆಟೋ ಡ್ರೈವರ್ | |
| ವಾಸ ಸ್ಥಳ | - | ಗೌರಿಕಾಲುವೆ | |

ದಿನಾಂಕಃ 29.12.2022 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

ಮುಖ್ಯ ವಿಚಾರಣೆ : ಸರ್ಕಾರಿ ಅಭಿಯೋಜಕರಿಂದ-

1. ಆರೋಪಿ ಗೊತ್ತು. ಚಾಸಾ.1 ಗೊತ್ತು. ಆರೋಪಿ ಮತ್ತು ಚಾಸಾ.1 ಸಹೋದರರು. ಸಹ ಪಂಚರಾದ ಪ್ರಾಸಾ.2 ಗೊತ್ತು. ಮೃತೆ ಸುಧಾ ಗೊತ್ತು. ಆಕೆ ಆರೋಪಿ ಮತ್ತು ಪ್ರಾಸಾ.1 ರವರ ತಾಯಿ.

2. ನಾನು ಗೌರಿಕಾಲುವೆಯಲ್ಲಿ ವಾಸವಾಗಿದ್ದುಕೊಂಡು ಆಟೋ ಚಾಲನೆ ಮಾಡಿಕೊಂಡಿದ್ದೇನೆ. ಗೌರಿಕಾಲುವೆಯಲ್ಲಿರುವ ಆಟೋ ಸರ್ಕಲ್ ನ ಎದುರಿಗೆ ಇರುವ ರವಿ ಎಂಬುವವರ ಮನೆಯಲ್ಲಿ ಮೃತೆ ಸುಧಾ ಮತ್ತು ಆಕೆಯ ಮಕ್ಕಳು ಘಟನೆಯ 2 ವರ್ಷಗಳ ಹಿಂದಿನಿಂದ ಲೀಸಿಗೆ ವಾಸವಾಗಿದ್ದರು. ಅಂದಿನಿಂದ ನನಗೆ ಅವರ ಪರಿಚಯವಿತ್ತು.

3. 2021 ನೇ ಇಸವಿ **9** ನೇ ತಿಂಗಳಿನಲ್ಲಿ ಒಂದು ದಿನ ನಾನು ಗೌರಿಕಾಲುವೆಯಲ್ಲಿರುವ ಆಟೋ ನಿಲ್ದಾಣದಲ್ಲಿದ್ದೆನು. ಆಗ

ಬಸವನಹಳ್ಳಿ ಪೊಲೀಸರು ಮೃತ ಸುಧಾ ರವರ ಮನೆಯ ಬಳಿ ಬಂದಿದ್ದರು. ಅಲ್ಲಿ ಜನ ಸೇರಿದ್ದರು. ಆಗ ಸಮಯ ಸಂಜೆ 7.00 ರಿಂದ 7.15 ಗಂಟೆಯಾಗಿತ್ತು. ಆಗ ನಾನು ನಮ್ಮ ಏರಿಯಾ ಕೌನ್ಸಿಲರ್ ಆದ ಪ್ರಾಸಾ.2 ರವರಿಗೆ ಫೋನ್ ಮಾಡಿ ಕರೆದೆನು. ನಂತರ ನಾವಿಬ್ಬರೂ ಸುಧಾರವರ ಮನೆಯ ಬಳಿ ಹೋದೆವು. ಆಗ ಪೊಲೀಸರು ನನ್ನನ್ನು ಮತ್ತು ಪ್ರಾಸಾ.2 ರವರನ್ನು ಮಹಜರ್ ಮಾಡಬೇಕು ಬನ್ನಿ ಎಂದು ಕರೆದು ನಮ್ಮನ್ನು ಮೃತ ಸುಧಾ ರವರ ಮನೆಯ ಒಳಗೆ ಕರೆದುಕೊಂಡು ಹೋದರು. ನಾವು ಅಲ್ಲಿಗೆ ಹೋದಾಗ ಮನೆಯ ಮುಂಭಾಗಿಲು ಸ್ವಲ್ಪ ಮಟ್ಟಿಗೆ ತೆರೆದಿತ್ತು. ನಂತರ ಪೊಲೀಸರು ಬಾಗಿಲನ್ನು ತಳ್ಳಿ ನಮ್ಮನ್ನು ಒಳಗೆ ಕರೆದುಕೊಂಡು ಹೋದರು. ಅಲ್ಲಿ ಮನೆಯ ಮುಖ್ಯ ಬಾಗಿಲಿನ ಒಳಭಾಗದಲ್ಲಿ ಸುಧಾರವರ ಮೃತ ದೇಹ ಬಿದ್ದಿತ್ತು. ಆಕೆಯ ಕಿವಿಯ ಬಳಿ ಓಪನ್ ಆಗಿತ್ತು, ಮುಖವೆಲ್ಲಾ ರಕ್ತವಾಗಿತ್ತು, ನೆಲದಲ್ಲಿ ರಕ್ತ ಹರಿದಿತ್ತು ಮತ್ತು ಗೋಡೆಯ ಮೇಲೆ ರಕ್ತ ಚಿಮ್ಮಿತ್ತು. ಪೊಲೀಸರು ಹಾಲಿನಲ್ಲಿ ನೆಲದಲ್ಲಿ ಬಿದ್ದಿದ್ದ ರಕ್ತವನ್ನು ear buds ನಿಂದ ಹೊರೆಸಿ ತೆಗೆದುಕೊಂಡರು. ಮನೆಯ ಹಾಲಿನ ಮೂಲೆಯೊಂದರಲ್ಲಿ ರಕ್ತದ ಕಲೆಗಳಾಗಿದ್ದ ಒಂದು ನೀಲಿ ಬಣ್ಣದ ಜೀನ್ಸ್ ಪ್ಯಾಂಟು, ಒಂದು ಟೀ ಶರ್ಟು ಇದ್ದವು. ಅವುಗಳನ್ನು ಪೊಲೀಸರು ಪ್ಯಾಕ್ ಮಾಡಿ ತೆಗೆದುಕೊಂಡರು. ಆ ಬಗ್ಗೆ ಪೊಲೀಸರು ಮಹಜರ್ ಮಾಡಿಕೊಂಡು ನನ್ನ ಮತ್ತು ಪ್ರಾಸಾ.2 ರವರ ಸಹಿಗಳನ್ನು ಪಡೆದುಕೊಂಡರು. ಸದರಿ ಮಹಜರನ್ನು ನೋಡಿದರೆ ಗುರುತಿಸುತ್ತೇನೆ. ಸಾಕ್ಷಿಯು ಸದರಿ

ಮಹಜರ್ ಮತ್ತು ಅದರಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿದ್ದು ಅದನ್ನು ಈಗಾಗಲೇ ನಿಪಿ.12 ಎಂದು ಗುರುತಿಸಲಾಗಿದ್ದು ಅದಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ.12(ಬಿ) ಎಂದು ಗುರುತಿಸಲಾಯಿತು. ಸಾಕ್ಷಿಯು ಈಗಾಗಲೇ ನಿಪಿ.11 ರಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ.11(ಬಿ) ಎಂದು ಗುರುತಿಸಲಾಯಿತು.

4. ಸ್ಥಳದಲ್ಲಿ ಪೊಲೀಸರು ಮಹಜರ್ ಮಾಡುವ ಸಮಯಕ್ಕೆ ಫೋಟೋಗಳನ್ನು ತೆಗೆದುಕೊಂಡರು. ಸಾಕ್ಷಿಯು ಈಗಾಗಲೇ ನಿಪಿ.3 ರಿಂದ ನಿಪಿ.6 ಎಂದು ಗುರುತಿಸಲಾಗಿರುವ ಫೋಟೋಗಳನ್ನು ನೋಡಿ ಗುರುತಿಸಿ ಅವುಗಳನ್ನು ಪೊಲೀಸರು ಸುಧಾರವರ ಮನೆಯಲ್ಲಿ ಮಹಜರ್ ಮಾಡುವ ಸಮಯಕ್ಕೆ ತೆಗೆದುಕೊಂಡಿದ್ದಾಗಿ ನುಡಿದಿರುತ್ತಾರೆ. ಸದರಿ ಫೋಟೋಗಳಲ್ಲಿ ಸುಧಾರವರ ಮೃತ ದೇಹ ಕಂಡು ಬರುವುದಾಗಿ ನುಡಿದು, ನಿಪಿ.3 ಫೋಟೋದಲ್ಲಿ ತನ್ನ ಹಾಗೂ ಪ್ರಾಸಾ.2 ರವರ ಇರುವಿಕೆಯನ್ನು ನೋಡಿ ಗುರುತಿಸಿರುತ್ತಾರೆ.

5. ಆ ದಿನ ಪೊಲೀಸರು ತೆಗೆದುಕೊಂಡ ರಕ್ತದ ಕಲೆಗಳಾಗಿದ್ದ ಜೀನ್ಸ್ ಪ್ಯಾಂಟು ಮತ್ತು ಶರ್ಟನ್ನು ನೋಡಿದರೆ ಗುರುತಿಸುತ್ತೇನೆ. ಸಾಕ್ಷಿಯು ಈಗಾಗಲೇ ಮು.ಮಾ.2 ಮತ್ತು 3 ಎಂದು ಗುರುತಿಸಲಾಗಿರುವ ಶರ್ಟು ಮತ್ತು ಪ್ಯಾಂಟನ್ನು ನೋಡಿ ಗುರುತಿಸಿ ಪೊಲೀಸರು ಆ ದಿನ ಸುಧಾರವರ ಮನೆಯಲ್ಲಿ

ಮಹಜರ್ ಮಾಡುವ ಸಮಯಕ್ಕೆ ತೆಗೆದುಕೊಂಡ ಬಟ್ಟೆಗಳು ಅವೇ ಎಂದು ನುಡಿದಿರುತ್ತಾರೆ. ಮು.ಮಾ.2 ಮತ್ತು 3 ರ ಮೇಲೆ ಅಂಟಿಸಲಾಗಿರುವ ಚೀಟಿಗಳಲ್ಲಿರುವ ತನ್ನ ಸಹಿಗಳನ್ನು ಸಾಕ್ಷಿ ನೋಡಿ ಗುರುತಿಸಿದ ಮೇರೆಗೆ ಅವುಗಳನ್ನು ಮು.ಮಾ.2(ಬಿ) ಮತ್ತು ಮು.ಮಾ.3(ಬಿ) ಎಂದು ಗುರುತಿಸಲಾಯಿತು. ಆ ದಿನ ಪೊಲೀಸರು ಸುಧಾರವರ ಮೃತದೇಹ ಬಿದ್ದಿದ್ದ ಸ್ಥಳದಲ್ಲಿ ನೆಲದ ಮೇಲೆ ಬಿದ್ದಿದ್ದ ರಕ್ತದ ಕಲೆಗಳನ್ನು ಹೊರೆಸಿ ಸಂಗ್ರಹಿಸಿ ತೆಗೆದ ear buds ಗಳನ್ನು ನೋಡಿದರೆ ಗುರುತಿಸುತ್ತೇನೆ.

6. ಸದರಿ ear buds ಗಳು ಇವೇ ಎಂದು ಹೇಳಿ ಕವರ್ ನಲ್ಲಿ ಎಫ್ ಎಸ್ ಎಲ್ ಸೀಲು ಮಾಡಲಾಗಿದ್ದ ವಸ್ತುಗಳನ್ನು ಆರೋಪಿ ಪರ ವಕೀಲರು ಮತ್ತು ಸರ್ಕಾರಿ ಅಭಿಯೋಜಕರ ಸಮಕ್ಷಮ ತೆರೆದು ಸಾಕ್ಷಿಗೆ ತೋರಿಸಲಾಗಿ ಸಾಕ್ಷಿಯು 2 ear buds ಗಳನ್ನು ನೋಡಿ ಗುರುತಿಸಿ ಆ ದಿನ ಪೊಲೀಸರು ಸುಧಾರವರ ಮನೆಯಲ್ಲಿ ಆಕೆಯ ಮೃತ ದೇಹ ಬಿದ್ದಿದ್ದ ಸ್ಥಳದಲ್ಲಿ ಇದ್ದ ರಕ್ತವನ್ನು ಹೊರೆಸಿ ತೆಗೆದ ear buds ಗಳು ಅವೆ ಎಂದು ನುಡಿದಿರುತ್ತಾರೆ. ಅವುಗಳನ್ನು ಒಟ್ಟಾಗಿ ಮು.ಮಾ.4 ಎಂದು ಗುರುತಿಸಲಾಯಿತು. ಮು.ಮಾ.4 ರ ಮೇಲೆ ಅಂಟಿಸಲಾಗಿರುವ ಚೀಟಿಯಲ್ಲಿರುವ ತನ್ನ ಸಹಿಯನ್ನು ಸಾಕ್ಷಿಯು ನೋಡಿ ಗುರುತಿಸಿ ಅದನ್ನು ಆ ದಿನ ಪೊಲೀಸರು ಮಹಜರ್ ಮಾಡುವ ಸಮಯಕ್ಕೆ ಮಾಡಿದ್ದಾಗಿ ನುಡಿದ ಮೇರೆಗೆ ಸದರಿ ಸಹಿಯನ್ನು ಮು.ಮಾ.4(ಎ) ಎಂದು

ಗುರುತಿಸಲಾಯಿತು.

7. ಮಹಜರ್ ಮಾಡುವ ಸಮಯಕ್ಕೆ ಮು.ಮಾ.2 ಮತ್ತು ಮು.ಮಾ.3 ಬಟ್ಟೆಗಳು ಫ್ರಾಸಾ.1 ರವರ ಅಣ್ಣನಾದ ಆರೋಪಿಯದ್ದು ಎಂದು ಗೊತ್ತಾಯಿತು.

<u>ಪಾಟೀ ಸವಾಲುಃ ಶ್ರೀ ಹೆಚ್ ಟಿ ಎಸ್ ಕೆ ವಕೀಲರಿಂದಃ ಆರೋಪಿ ಪರವಾಗಿಃ</u>

8. ಫ್ರಾಸಾ.1 ನಿಮ್ಮ ಸ್ನೇಹಿತ ಎಂದರೆ ಸರಿಯಲ್ಲ. ಆತ ಕೇವಲ ಪರಿಚಿತ. ಚಾಸಾ.4 ನಿಮ್ಮ ಸ್ನೇಹಿತ ಎಂದರೆ ಸರಿಯಲ್ಲ. ಈ ದಿನ ಚಾಸಾ.4 ಸುಭಾಷ್ ನಿಮಗೆ ಫೋನ್ ಮಾಡಿ ನ್ಯಾಯಾಲಯಕ್ಕೆ ಕರೆಸಿದ್ದಾರೆ ಎಂದರೆ ಸರಿಯಲ್ಲ. ನಾನು ಫ್ರಾಸಾ.1 ರವರ ಮನೆಗೆ ಹೋಗಿ ಬರುತ್ತಿರಲಿಲ್ಲ. ಫ್ರಾಸಾ.1 ರವರ ಮನೆಯಲ್ಲಿ ಯಾರ್ಯಾರು ವಾಸವಾಗಿದ್ದರು ಎಂದು ನಿಮಗೆ ಮಾಹಿತಿ ಇಲ್ಲ ಎಂದರೆ ಸಾಕ್ಷಿ ಮೃತ ಸುಧಾ ಬಾಬುಲಾಲ್ ರವರ ಅಂಗಡಿಗೆ ಕೆಲಸಕ್ಕೆ ಹೋಗುತ್ತಿದ್ದರು, ಆ ಸಮಯದಲ್ಲಿ ನಾನು ಅವರನ್ನು ನನ್ನ ಆಟೋದಲ್ಲಿ ಬಾಡಿಗೆಗೆ ಕರೆದುಕೊಂಡು ಹೋಗುತ್ತಿದ್ದೆನು, ಹಾಗಾಗಿ ನನಗೆ ಅವರ ಮನೆಯಲ್ಲಿ ಆಕೆ ಮತ್ತು ಆಕೆಯ ಇಬ್ಬರು ಮಕ್ಕಳು ವಾಸವಾಗಿದ್ದಾರೆ ಎಂದು ತಿಳಿದಿತ್ತು. ನಮ್ಮ ಆಟೋ ನಿಲ್ದಾಣದಿಂದ ಮೃತ ಸುಧಾರವರ ಮನೆಯ ನಡುವೆ ಒಂದು ರಸ್ತೆ ಇದೆ, ರಸ್ತೆಯ ಬದಿಗೆ ಸುಧಾರವರ ಮನೆಯಿತು.

9. ಆರೋಪಿ ಪ್ರತೀ ದಿನ ಆಟೋ ನಿಲ್ದಾಣದಲ್ಲಿರುವ ಅಂಗಡಿಗೆ ಬರುತ್ತಿದ್ದರು. ಆತ ಯಾರ ಬಳಿಯೂ ಹೆಚ್ಚಾಗಿ

ಮಾತನಾಡುತ್ತಿರಲಿಲ್ಲ. ಫ್ರಾಸಾ.1 ರವರು ಕೊರೊನಾದಿಂದಾಗಿ ಮನೆಯಲ್ಲಿ ಕೆಲಸ ಮಾಡುತ್ತಿದ್ದರು. ಆಗಾಗ ಸುಧಾರವರ ಮನೆಯಲ್ಲಿ ಕೂಗಾಡುವ ಶಬ್ದ ನಮ್ಮ ಆಟೋ ನಿಲ್ದಾಣದವರೆಗೂ ಕೇಳಿಸುತ್ತಿತ್ತು. ಪೊಲೀಸರು ನಿಪಿ.11 ನೋಟೀಸನ್ನು ಆಟೋ ನಿಲ್ದಾಣದ ಬಳಿ ಕೊಟ್ಟಿದ್ದರು. ಆಗ ಸಮಯ ಸಂಜೆ 7.00 ಗಂಟೆಯಾಗಿತ್ತು. ಆ ರೀತಿ ನೋಟೀಸು ಕೊಟ್ಟ 10 ನಿಮಿಷದ ಒಳಗಾಗಿ ನಾನು ಮತ್ತು ಫ್ರಾಸಾ.2 ರವರು ಪೊಲೀಸರೊಂದಿಗೆ ಸ್ಥಳಕ್ಕೆ ಹೋದೆವು.

10. ನಾನು ನಮ್ಮ ಏರಿಯಾದ ಕೌನ್ಸಿಲರ್ ಅಲ್ಲ. ಮಹಜರ್ ಮಾಡುವ ಸಮಯದಲ್ಲಿ ನಾವು ಮತ್ತು ಪೊಲೀಸರು ಸೇರಿ ಸುಮಾರು 7-8 ಜನರಿದ್ದೆವು. ನಾವು ಅಲ್ಲಿಗೆ ಹೋದಾಗ ಫ್ರಾಸಾ.1 ರವರು ಸುಧಾರವರ ಮನೆಯ ಹೊರಗೆ ನಿಂತು ಬಾಗಿಲನ್ನು ತೆಗಿ ಎಂದು ಆರೋಪಿಗೆ ಹೇಳುತ್ತಾ ಕೂಗಾಡುತ್ತಿದ್ದನು. ನಂತರ ಆತ ಬಾಗಿಲನ್ನು ತೆಗೆದನು, ಆಗ ಅದು ಸ್ವಲ್ಪ ತೆಗೆದುಕೊಂಡಿತು, ನಂತರ ಪೊಲೀಸರು ಅದನ್ನು ತಳ್ಳಿ ನಮ್ಮನ್ನು ಒಳಗಡೆಗೆ ಕರೆದುಕೊಂಡು ಹೋದರು. ಆರೋಪಿ ಬಾಗಿಲನ್ನು ತೆರೆದಾಗ ಸುಮಾರು ಕಾಲು ಅಡಿಯಷ್ಟು ಬಾಗಿಲು ತೆಗೆದುಕೊಂಡಿತ್ತು. ಆರೋಪಿ ಬಾಗಿಲನ್ನು ತೆರೆದಾಗ ಸುಮಾರು 3 ಜನ ಪೊಲೀಸರು ಬಾಗಿಲನ್ನು ಒಳಗೆ ತಳ್ಳಿದರು. ಘಟನೆ ನಡೆದ ಮನೆ ಮೊದಲ ಮಹಡಿಯಲ್ಲಿತ್ತು. ಮನೆಯ ಮುಂಭಾಗಿಲಿನ ಮುಂದೆ ಪ್ಯಾಸೇಜು ಇದ್ದು ಅಲ್ಲಿ ಹೆಚ್ಚು ಜನರು ಸೇರಲು ಸಾಧ್ಯವಿಲ್ಲ ಎಂದರೆ ಸರಿ.

11. ನೀವು ಒಳಗೆ ಹೋದಾಗ ಸುಧಾರವರ ಮೃತದೇಹ ಅಂಗಾತವಾಗಿ ಬಿದ್ದಿದ್ದಾಗಿ ಹೇಳಿರುವುದು ಸುಳ್ಳು ಎಂದರೆ ಸರಿಯಲ್ಲ. ಸುಧಾರವರ ಕಿವಿಯ ಬಳಿ ಓಪನ್ ಆಗಿದ್ದಾಗಿ ಮತ್ತು ಮುಖವೆಲ್ಲಾ ರಕ್ತವಾಗಿದ್ದಾಗಿ ಹೇಳಿರುವುದು ಸುಳ್ಳು ಎಂದರೆ ಸರಿಯಲ್ಲ. ನೆಲದಲ್ಲಿ ರಕ್ತ ಬಿದ್ದಿದ್ದಾಗಿ ಮತ್ತು ಗೋಡೆಯ ಮೇಲೆ ರಕ್ತ ಚಿಮ್ಮಿದ್ದಾಗಿ ಹೇಳಿರುವುದು ಸುಳ್ಳು ಎಂದರೆ ಸರಿಯಲ್ಲ. ಮನೆಯ ಡೈನಿಂಗ್ ಹಾಲಿನ ಒಂದು ಮೂಲೆಯಲ್ಲಿ ಬಿದ್ದಿದ್ದ ಮು.ಮಾ.2 ಮತ್ತು 3 ಬಟ್ಟೆಗಳನ್ನು ಪೊಲೀಸರು ತೆಗೆದುಕೊಂಡರು. ನೀವು ಮತ್ತು ಪೊಲೀಸರು ಮನೆಯ ಒಳಗಡೆ ಹೋದಾಗ ಅಲ್ಲಿ ಬೇರೆ ಯಾರು ಇರಲಿಲ್ಲವೇ ಎಂದರೆ ಸಾಕ್ಷಿ ಆರೋಪಿ ಅಲ್ಲಿಯೇ ಇದ್ದನು ಎನ್ನುತ್ತಾರೆ. ಆ ದಿನ ಪೊಲೀಸರು ಸ್ಥಳದಲ್ಲಿ ಸುಮಾರು 20 ನಿಮಿಷದಿಂದ 30 ನಿಮಿಷ ಇದ್ದರು. ಸಾಕ್ಷಿಗೆ ನಿಪಿ.12 ಪಂಚನಾಮೆಯಲ್ಲಿರುವ ಸಹಿಯನ್ನು ತೋರಿಸಿ ಅದನ್ನು ಎಲ್ಲಿ ಮಾಡಿದ್ದೀರಿ ಎಂದು ಕೇಳಲಾಗಿ ಸದರಿ ಸಹಿಯನ್ನು ಆಟೋ ನಿಲ್ದಾಣದ ಬಳಿ ಮಾಡಿದ್ದೇನೆ ಎನ್ನುತ್ತಾರೆ. ಆಟೋ ನಿಲ್ದಾಣದಲ್ಲಿ ಸಹಿ ಮಾಡಿದ್ದೇನೆ ಮತ್ತು ಆಧಾರ್ ಕಾರ್ಡನ್ನು ನೀಡಲು ಪೊಲೀಸ್ ಠಾಣೆಗೆ ಹೋಗಿದ್ದಾಗ ಅಲ್ಲಿಯೂ ಸಹಿ ಮಾಡಿದ್ದೇನೆ. ನಿಪಿ.12 ಕ್ಕೆ ಪೊಲೀಸ್ ಠಾಣೆಯಲ್ಲಿ ಸಹಿ ಮಾಡಿದ್ದೀರಿ ಎಂದರೆ ಸಾಕ್ಷಿ ಗೌರಿಕಾಲುವೆ ಆಟೋ ನಿಲ್ದಾಣದಲ್ಲಿ, ಸುಧಾರವರ ಮನೆಯಲ್ಲಿ ಮತ್ತು ಪೊಲೀಸ್ ಠಾಣೆಗೆ ಆಧಾರ್ ಕಾರ್ಡನ್ನು ನೀಡಲು ಹೋದಾಗ ಸಹಿ ಮಾಡಿದ್ದೇನೆ ಎನ್ನುತ್ತಾರೆ.

12. ನಿಪಿ.12 ರಲ್ಲಿ ಬರೆದಿರುವ ವಿಚಾರಗಳು ನನಗೆ ಗೊತ್ತಿಲ್ಲ. ಮು.ಮಾ.2, 3 ಮತ್ತು 4 ರವರ ಮೇಲೆ ಇರುವ ಸಹಿಗಳನ್ನು ಸುಧಾರವರ ಮನೆಯಲ್ಲಿ ಮಾಡಿದ್ದೇನೆ. ಪೊಲೀಸರು ನಿಮ್ಮ ಸಮಕ್ಷಮ ಮು.ಮಾ.2 ಮತ್ತು 3 ನ್ನು ಪ್ಯಾಕ್ ಮಾಡಿ ತೆಗೆದುಕೊಂಡಿರುವುದಾಗಿ ಹೇಳಿರುವುದು ಸುಳ್ಳು ಎಂದರೆ ಸರಿಯಲ್ಲ. ಮು.ಮಾ.4 Ear bud ನಲ್ಲಿ ರಕ್ತವನ್ನು ಹೊರೆಸಿ ತೆಗೆದುಕೊಂಡಿದ್ದಾಗಿ ಹೇಳಿರುವುದು ಸುಳ್ಳು ಎಂದರೆ ಸರಿಯಲ್ಲ. ಪೊಲೀಸರು ಹೇಳಿದ್ದರಿಂದ ನೀವು ನಿಪಿ.3 ಫೋಟೋದಲ್ಲಿ ನಿಂತುಕೊಂಡಿದ್ದೀರಿ ಹೊರತು ನಿಮಗೆ ಬೇರೆ ಯಾವುದೇ ಮಾಹಿತಿ ಇಲ್ಲ ಎಂದರೆ ಸರಿಯಲ್ಲ.

13. ಮು.ಮಾ.2 ರಿಂದ 4 ರ ಮೇಲೆ ಇರುವ ಸಹಿಗಳನ್ನು ಪೊಲೀಸ್ ಠಾಣೆಯಲ್ಲಿ ಮಾಡಿದ್ದೀರಿ ಎಂದರೆ ಸರಿಯಲ್ಲ. ನಿಮಗೆ ಯಾವುದೇ ಮಾಹಿತಿ ಇಲ್ಲದಿದ್ದರೂ ಸಹ ನೀವು ಫ್ರಾಸಾ.1 ರವರ ಆತ್ಮೀಯ ಸ್ನೇಹಿತನಾಗಿರುವ ಕಾರಣ ಆತನಿಗೆ ಸಹಾಯ ಮಾಡಲು ಸುಳ್ಳುಸಾಕ್ಷ್ಯನುಡಿಯುತ್ತಿದ್ದೀರಿ ಎಂದರೆ ಸರಿಯಲ್ಲ.

<u>ಮರು ವಿಚಾರಣೆ ಇಲ್ಲಃ</u>

(ನನ್ನ ಉಕ್ತಲೇಖನಕ್ಕೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯ್ತು)

ಓ.ಹೇ.ಕೇ.ಸ.ಇ.ಎ.ಒ.

ಸಹಿ/-
(ಭಾನುಮತಿ ಬಿ.ಸಿ)
2 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಚಿಕ್ಕಮಗಳೂರು.

ಸಾಕ್ಷಿಯ ಸಹಿ